**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**<u>ಎಸ್.ಸಿ. ನಂಃ 10023/2018</u>**

**ಚಾಸಾ ಃ 05**

**ಪ್ರಾಸಾ ಃ 05**

| | | |
|---|---|---|
| **ಹೆಸರು** | **ಃ** | **ರವಿಕುಮಾರ್** |
| **ತಂದೆಯ ಹೆಸರು** | **ಃ** | **ರಾಜಣ್ಣ** |
| **ವಯಸ್ಸು** | **ಃ** | **25 ವರ್ಷ** |
| **ವೃತ್ತಿ** | **ಃ** | **ಖಾಸಗಿ ಫ್ಯಾಕ್ಟರಿಯಲ್ಲಿ ಕೆಲಸ** |
| **ವಾಸ** | **ಃ** | **ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 24.09.2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ</u>**

1. ಚಾಸಾ-1 ಮತ್ತು 2 ನನ್ನ ದೊಡ್ಡಮ್ಮನ ಮಕ್ಕಳು. ಚಾಸಾ 3 ನನ್ನ ದೊಡ್ಡಮ್ಮ. ಚಾಸಾ-4 ನನ್ನ ತಾಯಿ. ನಮ್ಮ ಮನೆಗಳು ಎದುರುಬದುರು ಇವೆ. ನಮ್ಮ ಮನೆಯಲ್ಲಿ ನಾನು, ನನ್ನ ತಾಯಿ ಇದ್ದೇವೆ. ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ನನಗೆ ಗೊತ್ತಿಲ್ಲ.

2. ಮೂರು ವರ್ಷಗಳ ಹಿಂದೆ ಯಾರೂ ನಮ್ಮ ದೊಡ್ಡಮ್ಮ ಮನೆ ಬಳಿ ರಾತ್ರಿ ಸಮಯ ಬಂದು ಗಲಾಟೆ ಮಾಡಿರಲಿಲ್ಲ ಹಾಗೂ ನನ್ನ ದೊಡ್ಡಮ್ಮನ ಮಕ್ಕಳ ಮೇಲೆ ಹಲ್ಲೆ ಮಾಡಿರಲಿಲ್ಲ ಹಾಗೂ ಅವರ ಮೇಲೆ ಯಾವುದೇ ಗಾಯಗಳಾಗಿರಲಿಲ್ಲ. ಆದರೆ ಬೆಳಗಿನ ಜಾವ 3.30 ಗಂಟೆಗೆ ಚಾಸಾ 1 ಮತ್ತು 2 ಆಸ್ಪತ್ರೆಗೆ ಹೋಗಿದ್ದಾರೆ ಎಂದು ಗೊತ್ತಾಯಿತು. ಯಾವ ಕಾರಣಕ್ಕೆ ಅವರು ಆಸ್ಪತ್ರೆಗೆ ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ಮು.ಮಾ 1 ಚಾಕು ಮತ್ತು ಮು.ಮಾ 2 ಕಬ್ಬಿಣದ ಪೈಪು ಇವುಗಳನ್ನು ನಾನು

ಹಿಂದೆ ನೋಡಿಲ್ಲ. ಆರೋಪಿಗಳು ನನ್ನ ದೊಡ್ಡಮ್ಮನ ಮಕ್ಕಳೊಂದಿಗೆ ಗಲಾಟೆ ಮಾಡಿ ಹಲ್ಲೆ ಮಾಡಿದರು ಎಂದು ಅವರನ್ನು ಗುರುತಿಸಿ ನಾನು ಯಾವುದೇ ಹೇಳಿಕೆ ಕೊಟ್ಟಿರಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಅಭಿಯೋಜಕರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದ ಃ</u>**

3. ದಿ.12.10.2016 ರ ಬೆಳಗಿನ ಜಾವ 2.45 ಗಂಟೆಯಲ್ಲಿ ನಮ್ಮ ದೊಡ್ಡಮ್ಮನ ಮನೆಯ ಪ್ಯಾಸೇಜ್‌ಗೆ ಹಾಕಿರುವ ಬೀಗವನ್ನು ಹೊಡೆಯುವ ಶಬ್ದ ಕೇಳಿ ನಾನು ಮತ್ತು ನನ್ನ ತಾಯಿ ಹೊರಗೆ ಬಂದು ನೋಡಿದಾಗ ಈ ಕೇಸಿನ ಆರೋಪಿಗಳು ಅಲ್ಲಿದ್ದು, ಮು.ಮಾ 1 ಮತ್ತು 2 ಇವುಗಳಿಂದ ಚಾಸಾ 1 ಮತ್ತು 2 ರವರ ಮೇಲೆ ಹಲ್ಲೆ ಮಾಡಿದ್ದನ್ನು ನಾನು ನೋಡಿದೆ ಹಾಗೂ ಜೋರಾಗಿ ಕೂಗಿಕೊಂಡಾಗ ಆರೋಪಿಗಳು ಅಲ್ಲಿಂದ ಓಡಿ ಹೋದರು ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ದೊಡ್ಡಮ್ಮನ ಮೇಲೆ ಕೈಗಳಿಂದ ಹಲ್ಲೆ ಮಾಡಿದ್ದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ದೊಡ್ಡಮ್ಮನ ಮಕ್ಕಳನ್ನು ಕೊಲೆ ಮಾಡುವ ಉದ್ದೇಶದಿಂದ ಆರೋಪಿಗಳು ಆ ರೀತಿ ಹಲ್ಲೆ ಮಾಡಿದ್ದರು ಎಂದು ನಾನು ನಿಪಿ-9 ರೀತ್ಯಾ ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆರೋಪಿಗಳೇ ಕೃತ್ಯ ಮಾಡಿರುತ್ತಾರೆಂದು ಗೊತ್ತಿದ್ದರೂ ಅವರಿಗೆ ಹೆದರಿ ನಿಜ ವಿಚಾರವನ್ನು ಮುಚ್ಚಿಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿಗಳ ಪರ ವಕೀಲರವರಿಂದ ಃ</u>**

ಏನೂ ಇಲ್ಲ.

**<u>ಮರು ವಿಚಾರಣೆ</u>** ಃ ಇಲ್ಲ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. ನಂಃ 10023/2018**

**ಚಾಸಾ ಃ 04**

**ಪ್ರಾಸಾ ಃ 04**

| | | |
|---|---|---|
| **ಹೆಸರು** | **ಃ** | **ವರಲಕ್ಷ್ಮಮ್ಮ** |
| **ಗಂಡನ ಹೆಸರು** | **ಃ** | **ರಾಜಣ್ಣ** |
| **ವಯಸ್ಸು** | **ಃ** | **42 ವರ್ಷ** |
| **ವೃತ್ತಿ** | **ಃ** | **ಗಾರ್ಮೆಂಟ್ಸ್‌ನಲ್ಲಿ ಕೆಲಸ** |
| **ವಾಸ** | **ಃ** | **ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 24.09.2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಚಾಸಾ-1 ಮತ್ತು 2 ನನ್ನ ಅಕ್ಕನ ಮಕ್ಕಳು. ಚಾಸಾ 3 ನನ್ನ ಅಕ್ಕ. ಚಾಸಾ-5 ನನ್ನ ಮಗ. ಚಾಸಾ 3 ಮತ್ತು ನಮ್ಮ ಮನೆ ಎದುರುಬದುರು ಇವೆ. ನಮ್ಮ ಮನೆಯಲ್ಲಿ ನಾನು, ನನ್ನ ಮಗ ಇದ್ದೇವೆ. ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ನನಗೆ ಗೊತ್ತಿಲ್ಲ.

2. ಮೂರು ವರ್ಷಗಳ ಹಿಂದೆ ಯಾರೂ ನಮ್ಮ ಅಕ್ಕನ ಮನೆ ಬಳಿ ರಾತ್ರಿ ಸಮಯ ಬಂದು ಗಲಾಟೆ ಮಾಡಿರಲಿಲ್ಲ ಹಾಗೂ ನನ್ನ ಅಕ್ಕನ ಮಕ್ಕಳ ಮೇಲೆ ಹಲ್ಲೆ ಮಾಡಿರಲಿಲ್ಲ ಗಾಗೂ ಅವರ ಮೇಲೆ ಯಾವುದೇ ಗಾಯಗಳಾಗಿರಲಿಲ್ಲ. ಈಗ ನನಗೆ ತೋರಿಸಿದ ಮು.ಮಾ 1 ಚಾಕು ಮತ್ತು ಮು.ಮಾ 2 ಕಬ್ಬಿಣದ ಪೈಪು ಇವುಗಳನ್ನು ನಾನು ಹಿಂದೆ ನೋಡಿಲ್ಲ. ಆರೋಪಿಗಳು ನನ್ನ ಅಕ್ಕನ ಮಕ್ಕಳೊಂದಿಗೆ ಗಲಾಟೆ ಮಾಡಿ ಹಲ್ಲೆ ಮಾಡಿದರು ಎಂದು ಅವರನ್ನು ಗುರುತಿಸಿ ನಾನು ಯಾವುದೇ ಹೇಳಿಕೆ ಕೊಟ್ಟಿರಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಅಭಿಯೋಜಕರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದ :</u>**

6. ದಿ.12.10.2016 ರ ಬೆಳಗಿನ ಜಾವ 2.45 ಗಂಟೆಯಲ್ಲಿ ನಮ್ಮ ಅಕ್ಕನ ಮನೆಯ ಪ್ಯಾಸೇಜ್‌ಗೆ ಹಾಕಿರುವ ಬೀಗವನ್ನು ಹೊಡೆಯುವ ಶಬ್ದ ಕೇಳಿ ನಾನು ಮತ್ತು ನನ್ನ ಮಗ ಹೊರಗೆ ಬಂದು ನೋಡಿದಾಗ ಈ ಕೇಸಿನ ಆರೋಪಿಗಳು ಅಲ್ಲಿದ್ದು, ಮು.ಮಾ 1 ಮತ್ತು 2 ಇವುಗಳಿಂದ ಚಾಸಾ 1 ಮತ್ತು 2 ರವರ ಮೇಲೆ ಹಲ್ಲೆ ಮಾಡಿದ್ದನ್ನು ನಾನು ನೋಡಿದೆ ಹಾಗೂ ಜೋರಾಗಿ ಕೂಗಿಕೊಂಡಾಗ ಆರೋಪಿಗಳು ಅಲ್ಲಿಂದ ಓಡಿ ಹೋದರು ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ಅಕ್ಕನ ಮೇಲೆ ಕೈಗಳಿಂದ ಹಲ್ಲೆ ಮಾಡಿದ್ದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ಅಕ್ಕನ ಮಕ್ಕಳನ್ನು ಕೊಲೆ ಮಾಡುವ ಉದ್ದೇಶದಿಂದ ಆರೋಪಿಗಳು ಆ ರೀತಿ ಹಲ್ಲೆ ಮಾಡಿದ್ದರು ಎಂದು ನಾನು ನಿಪಿ-8 ರೀತ್ಯಾ ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆರೋಪಿಗಳೇ ಕೃತ್ಯ ಮಾಡಿರುತ್ತಾರೆಂದು ಗೊತ್ತಿದ್ದರೂ ಅವರಿಗೆ ಹೆದರಿ ನಿಜ ವಿಚಾರವನ್ನು ಮುಚ್ಚಿಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿಗಳ ಪರ ವಕೀಲರವರಿಂದ :</u>**

6. ಏನೂ ಇಲ್ಲ.

**<u>ಮರು ವಿಚಾರಣೆ</u>** :

ಇಲ್ಲ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. ನಂಃ 10023/2018**

**ಚಾಸಾ ಃ 03**

**ಪ್ರಾಸಾ ಃ 03**

| | | |
|---|---|---|
| **ಹೆಸರು** | **ಃ** | **ರಾಜಮ್ಮ** |
| **ಗಂಡನ ಹೆಸರು** | **ಃ** | **ಲೇಟ್ ಹೊನ್ನಯ್ಯ** |
| **ವಯಸ್ಸು** | **ಃ** | **48 ವರ್ಷ** |
| **ವೃತ್ತಿ** | **ಃ** | **ಗೃಹಿಣಿ** |
| **ವಾಸ** | **ಃ** | **ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 24.09.2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಚಾಸಾ-1 ಮತ್ತು 2 ನನ್ನ ಮಕ್ಕಳು. ಚಾಸಾ 4 ನನ್ನ ತಂಗಿ. ಚಾಸಾ-5 ನಮ್ಮ ಮನೆಯ ಬಳಿ ವಾಸವಿದ್ದಾರೆ. ನಮ್ಮ ಮನೆಯಲ್ಲಿ ನಾನು, ಚಾಸಾ1 ಮತ್ತು 2 ರವರ ಜೊತೆ ವಾಸವಿದ್ದೇವೆ. ಚಾಸಾ 4 ನಮ್ಮ ಮನೆ ಎದುರು ವಾಸವಿದ್ದೇವೆ. ಚಾಸಾ 5 ಚಾಸಾ 4 ರವರ ಮಗ. ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ನನಗೆ ಗೊತ್ತಿಲ್ಲ.

2. ಮೂರು ವರ್ಷಗಳ ಹಿಂದೆ ಯಾರೂ ನಮ್ಮ ಮನೆ ಬಳಿ ರಾತ್ರಿ ಸಮಯ ಬಂದು ಗಲಾಟೆ ಮಾಡಿರಲಿಲ್ಲ ಹಾಗೂ ನನ್ನ ಮಕ್ಕಳ ಮೇಲೆ ಹಲ್ಲೆ ಮಾಡಿರಲಿಲ್ಲ. ನನ್ನ ಮಕ್ಕಳ ಮೇಲೆ ಯಾವುದೇ ಗಾಯಗಳಾಗಿರಲಿಲ್ಲ. ಈಗ ನನಗೆ ತೋರಿಸಿದ ಮು.ಮಾ 1 ಚಾಕು ಮತ್ತು ಮು.ಮಾ 2 ಕಬ್ಬಿಣದ ಪೈಪು ಇವುಗಳನ್ನು ನಾನು ಹಿಂದೆ ನೋಡಿಲ್ಲ.

3. ಈಗ ನೋಡಿದ ಎರಡು ಪಂಚನಾಮೆಗಳಲ್ಲಿ ನನ್ನ ಸಹಿಗಳು ಇವೆ. ದಿಃ 12.10.2016 ರ ಪಂಚನಾಮೆಯನ್ನು ನಿಪಿ-5 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-5ಎ ಎಂದು ಗುರುತಿಸಲಾಯಿತು. ದಿಃ 09.11.2016 ರ ಪಂಚನಾಮೆಯನ್ನು ನಿಪಿ-6 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-6ಎ ಎಂದು ಗುರುತಿಸಲಾಯಿತು. ಸುಮಾರು 3 ವರ್ಷಗಳ ಹಿಂದೆ ನಿಪಿ-5ಎ ಸಹಿಯನ್ನು ನಾನು ಮನೆಯ ಬಳಿ ಪೋಲೀಸರು ಬಂದಾಗ ಮಾಡಿದ್ದು ನಿಪಿ-6ಎ ಸಹಿಯನ್ನು ಪೋಲೀಸು ಠಾಣೆಯಲ್ಲಿ ಮಾಡಿದೆ. ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈಗ ನೋಡಿದ ಮು.ಮಾ 3 ಮತ್ತು 4 ಬಟ್ಟೆಗಳನ್ನು ನಾನು ಈಗ ಹಿಂದೆ ನೋಡಿಲ್ಲ. ಆ ಬಟ್ಟೆಗಳು ನನ್ನ ಮಕ್ಕಳಿಗೆ ಸೇರಿರುವುದಿಲ್ಲ.

**4. ಈ ಹಂತದಲ್ಲಿ ಮಾಲುಪಟ್ಟಿ 137/2016 ರಲ್ಲಿರುವ ಐಟಂ 1 ರಕ್ತ ಕಲೆಯಾದ ಹತ್ತಿ ಚೂರುಗಳನ್ನು ಮೊಹರು ಮಾಡಿ ಬಿಳಿ ಬಟ್ಟೆಯಲ್ಲಿ ಸುತ್ತಿದ್ದು ಅವುಗಳನ್ನು ಸಾಕ್ಷಿದಾರರಿಗೆ ತೋರಿಸುವ ಸಲುವಾಗಿ ಬಟ್ಟೆಯನ್ನು ತೆರೆದು ತೋರಿಸಲಾಗಿ ಸಾಕ್ಷಿದಾರರು ಅದನ್ನು ಗುರುತಿಸಿರುವುದಿಲ್ಲ. ಸಾಕ್ಷಿದಾರರಿಗೆ ಅವುಗಳನ್ನು ತೋರಿಸಲಾಗಿದೆ ಎಂಬ ಕಾರಣಕ್ಕಾಗಿ ಸದರಿ ಹತ್ತಿ ಚೂರುಗಳಿರುವ ಪ್ಲಾಸ್ಟಿಕ್ ಡಬ್ಬಿಯನ್ನು ಮು.ಮಾ 5 ಎಂದು ಗುರುತಿಸಲಾಯಿತು.** ಮು.ಮಾ 5 ಮೇಲೆ ಅಂಟಿಸಿರುವ ಬಿಳಿ ಚೀಟಿ ಮೇಲೆ ಇರುವ ಸಹಿ ನನ್ನದಲ್ಲ.

5. ಆರೋಪಿಗಳು ನನ್ನ ಮಕ್ಕಳಿಗೆ ಹಲ್ಲೆ ಮಾಡಿದರು ಎಂದು ಅವರನ್ನು ಗುರುತಿಸಿ ನಾನು ಯಾವುದೇ ಹೇಳಿಕೆ ಕೊಟ್ಟಿರಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಅಭಿಯೋಜಕರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದ ಃ**

6. ದಿ.12.10.2016 ರ ಬೆಳಗಿನ ಜಾವ 2.45 ಗಂಟೆಯಲ್ಲಿ ನಮ್ಮ ಮನೆಯ ಪ್ಯಾಸೇಜ್‌ಗೆ ಹಾಕಿರುವ ಬೀಗವನ್ನು ಹೊಡೆಯುವ ಶಬ್ದ ಕೇಳಿ ನಾನು ಹೊರಗೆ ಬಂದು ನೋಡಿದಾಗ ನನ್ನ ಮಗ ಚಾಸಾ-2 ಬಾಗಿಲು ತೆಗೆದಾಗ, ಈ ಕೇಸಿನ ಆರೋಪಿಗಳು ಅಲ್ಲಿದ್ದು, ಆತನ ತಲೆ ಮೇಲೆ ಮು.ಮಾ 2 ರಾಡಿನಿಂದ ಹೊಡೆದು ಅವಾಚ್ಯ ಶಬ್ದಗಳಿಂದ ಬೈದು ಮು.ಮಾ 1 ಚಾಕುವಿನಿಂದ ತಿವಿದು ರಕ್ತಗಾಯ ಪಡಿಸಿದ್ದಲ್ಲದೆ ಚಾಸಾ-1 ರವರ ಎಡಕೆನ್ನೆಗೆ ಸಹ ಚಾಕುವಿನಿಂದ ಇರಿದು ಬಲಗಾಲಿನ ತೊಡೆಗೆ ತಿವಿದರು ಎಂದರೆ ಸರಿಯಲ್ಲ. ಅಷ್ಟರಲ್ಲಿ ನಾನು ಎದ್ದು ಹೊರಗೆ ಬಂದಾಗ ನನ್ನ ಮೇಲೆ ಸಹ ಆರೋಪಿಗಳು ಹಲ್ಲೆ ಮಾಡಿದರು, ನಮ್ಮನ್ನು ಕೊಲೆ ಮಾಡುವ ಉದ್ದೇಶದಿಂದ ಆರೋಪಿಗಳು ಆ ರೀತಿ ಹಲ್ಲೆ ಮಾಡಿದ್ದರು ಎಂದು ನಾನು ನಿಪಿ-7 ರೀತ್ಯಾ ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ.

7. ಕೃತ್ಯ ನಡೆದ ದಿನ ಮದ್ಯಾಹ್ನ 2.30 ಗಂಟೆಗೆ ಪೋಲೀಸರು ನಮ್ಮ ಮನೆಯ ಬಳಿ ಬಂದಾಗ ಕೃತ್ಯ ನಡೆದ ಜಾಗವನ್ನು ನಾನು ಅವರಿಗೆ ತೋರಿಸಿದ್ದು ಅಲ್ಲಿ ಬಿದ್ದಿದ್ದ ನನ್ನ ಮಕ್ಕಳ ರಕ್ತದ ಮಾದರಿಯನ್ನು ಹತ್ತಿಯಲ್ಲಿ ಪೋಲೀಸರು ಸಂಗ್ರಹಿಸಿದ್ದ ಮು.ಮಾ 5ಹತ್ತಿ ಚೂರುಗಳನ್ನು ಅಮಾನತ್ತು ಪಡಿಸಿಕೊಂಡು ಬರೆದ ನಿಪಿ-5 ಪಂಚನಾಮೆಯಲ್ಲಿರುವ ವಿಚಾರಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

8. ಮು.ಮಾ 3 ಮತ್ತು 4 ನನ್ನ ಮಕ್ಕಳಿಗೆ ಸೇರಿದ ಹಾಗೂ ಕೃತ್ಯ ನಡೆದ ಸಮಯದಲ್ಲಿ ಅವರು ಹಾಕಿದ್ದ ಹಾಗೂ ರಕ್ತ ತಾಗಿದ್ದ ಬಟ್ಟೆಗಳು ಆಗಿವೆ ಎಂದರೆ ಸರಿಯಲ್ಲ. ಸದರಿ ಬಟ್ಟೆಗಳನ್ನು ನಾನು ದಿಃ 09.11.2016 ರಂದು ಪೋಲೀಸು ಠಾಣೆಗೆ ಹೋಗಿ ಕೊಟ್ಟಾಗ ಪೋಲೀಸರು ಅವುಗಳನ್ನು ಅಮಾನತ್ತು ಪಡಿಸಿಕೊಂಡು ಬರೆದ ನಿಪಿ-6 ಪಂಚನಾಮೆಯಲ್ಲಿರುವ

ವಿಚಾರಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳೇ ಕೃತ್ಯ ಮಾಡಿರುತ್ತಾರೆಂದು ಗೊತ್ತಿದ್ದರೂ ಅವರಿಗೆ ಹೆದರಿ ನಿಜ ವಿಚಾರವನ್ನು ಮುಚ್ಚಿಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿಗಳ ಪರ ವಕೀಲರವರಿಂದ ಃ**

6. ಏನೂ ಇಲ್ಲ.

**ಮರು ವಿಚಾರಣೆ** ಃ

ಇಲ್ಲ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ